

ಆಗಸದೆತ್ತರದ ಮರಗಳು



ದಬ್ಬೆಯ ಕಡಿದಾದ ಹಾದಿ

ದಡಕ್ಕೆ ತಂದು ಒಗೆಯಿತು. ಇದಕ್ಕಿಂತ ಕಠಿಣವಾದ ಇಳುಕಲು ದಬ್ಬೆ ಜಲಪಾತದ್ದು. 80 ಡಿಗ್ರಿಯಲ್ಲಿರುವ ಕೋಟೆಗೋಡೆಯಂತೆ ಕಡಿದಾದ ಹಾದಿಯಲ್ಲಿ, ಕೆಲವು ಕಡೆ ಹಗ್ಗ ಹಿಡಿದೇ ಸಂಭಾಳಿಸಬೇಕು. ತುಸು ಎಚ್ಚರಗೆಟ್ಟರೂ ಕೈಕಾಲುಗಳ ಊನ ಗ್ಯಾರಂಟಿ.

ನಮ್ಮ ಗುಂಪಿನಲ್ಲಿ ಚಾರಣಕ್ಕೆ ಅನುಕೂಲವಲ್ಲದ ದೇಹವುಳ್ಳ ಅನೇಕರಿದ್ದರು. ಅವರು ದಬ್ಬೆಗೆ ಮೊದಮೊದಲು ಹಿಂಜರಿದರು. ಬಳಿಕ ದಬ್ಬೆಯ ಕಣಿವೆಯನ್ನು ಇಳಿದೇರಿದರು. ಧಬಧಬೆಯ ಚೆಲುವನ್ನು ನೋಡುವ ತವಕಕ್ಕಿಂತ, ಬಾಳಿನಲ್ಲಿ ಸವಾಲು ಎದುರಾದಾಗ ಬೆಂಗೊಡದೆ ಮುಖಾಮುಖಿ ಮಾಡುವ ಛಲವೇ ಇನ್ನಿಲ್ಲದ ಕಸುವನ್ನು ಕೊಟ್ಟಿರಬೇಕು. ಈ ಕಾರಣಕ್ಕೆ ಚಾರಣವು, ಕೇವಲ ಕೈಕಾಲು ನೋಯಿಸುವ ಅಥವಾ ಕಣ್ಣಣಿಸುವ ಕ್ರಿಯೆಯಲ್ಲ. ಪಡುವಣ ಘಟ್ಟದ ಮಲೆಕಾಡು ಏಕರೂಪಿಯಲ್ಲ. ಹೊಳೆದಂಡೆಯಲ್ಲಿ ಅಥವಾ ಬಯಲಲ್ಲಿ ಬೇರೆಯೇ ಸಸ್ಯಾವಳಿ; ಜಂಬಿಟ್ಟಿಗೆ ಕಲ್ಲಿನ ಬ್ಯಾಣಗಳಲ್ಲಿ ಚಳಿಗೆ ಮಾಗಿದ ಬಿಳಿರೇಶ್ಮೆಯಂತೆ ನಯವಾಗಿ ಬೆಳೆದ ಗೇಣುದ್ದುದ ಹುಲ್ಲು; ಅಲ್ಲೇ ಮಿದುಮಣ್ಣಿದ್ದ ಕಡೆ ತಗ್ಗಿನಲ್ಲಿ ಗುಂಪಾಗಿ ಬೆಳೆದ ಕರಿಮತ್ತಿ, ಬಿಳಿಮತ್ತಿ, ಹೊನ್ನೆ, ಸುರಹೊನ್ನೆ, ಧೂಪ, ಗುಳಮಾವು ಮರಗಳು; ಆಳವಾದ ಕಣಿವೆಯಲ್ಲಿ ಬೇರಿಗೆ ಲಗತ್ತಾದ ಕಾಂಡವನ್ನು ಗೋಡೆಯಂತೆ ಮಾಡಿಕೊಂಡು ಬೆಳೆದ ಭಾರೀ ವೃಕ್ಷಗಳು; ಬೆಟ್ಟದ ತುದಿಗೆ ಹೋಗುತ್ತಿದ್ದಂತೆ ಮರಗಳೆಲ್ಲ ಮರೆಯಾಗಿ ಗೋಚರಿಸುವ ಬೊಕ್ಕತಲೆಗಳ ನೆತ್ತಿ; ಅದರ ಮೇಲೆ ಕ್ಷುದ್ರವೆಂಬಂತೆ ತೋರುವ ಕಾರೆಗಿಡ, ಈಚಲುಗುತ್ತಿ, ಎದೆಯುದ್ದದ ಕರಡ; ಆ ಕರಡದ ಹುಲ್ಲನ್ನು ತಿಂದು ತೊಪ್ಪೆ ಹಾಕಿದ ಕಾಡೆಮ್ಮೆಗಳು; ಅವನ್ನು ತಿನ್ನುವ ಹುಳುಗಳು. ತಗ್ಗುದಿಣ್ಣೆಗಳಿಗೆ ಅನುಸಾರವಾಗಿ ಹಂಚಿಕೆಯಾಗಿರುವ ಈ ಸಸ್ಯಾವಳಿ, ಬೇರೆಬೇರೆ ಪ್ರಾಣಿಪಕ್ಷಿಗಳಿಗೆ ಬೇಕಾದಂತೆ ಹುಲ್ಲು,